# ಅನುದಿನದಲಿ ಬಂದು ತನುವ ಸ್ನೇಹವ ಮಾಡಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 26.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 220.
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 17.
4. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 51.
5. **Note:** Lyrics given without highlights are as per Ref. 1. The wordings in Ref. 2 (there are only 5 stanzas) are same as in Ref. 1. The wordings in Ref. 3 are slightly different and are given in green highlights. The wordings in Ref. 4 are same as in Ref. 3. In Ref. 3 & 4 there are only 5 + 1 stanzas.
6. **Note:** Singer has followed lyrics as in Ref. 1.

ರಾಗ: ಯದುಕುಲಕಾಂಭೋಜ ತಾಳ: ತ್ರಿಪುಟ

ಅನುದಿನದಲಿ ಬಂದು ತನುವ ಸ್ನೇಹವ ಮಾಡಿ
ಎನ ಬಿಟ್ಟು ಹೋಗುತೀಯಾ ಜೀವವೆ || ಪ ||

ಘನ ಕೋಪದಿಂದ ಬಂದು ಯಮನವರೆಳೆದೊಯ್ವಾಗ
ನಿನ ಕೂಡಿನ್ನೇತರ ಮಾತೋ ಕಾಯವೆ || ಅಪ ||

ಬೆಲ್ಲದ ಹೇರಿನಂತೆ ಬೇಕಾದ ಬಂಧುಬಳಗ
ನಿಲ್ಲೋ ಮಾತು ಹೇಳುತೇನೋ ಜೀವವೆ
ನಿಲ್ಲಗೊಡದೆ ಬಂದು ಯಮನವರೆಳೆದೊಯ್ಯುವಾಗ
ಬೆಲ್ಲ ಬೇವಾಯಿತಲ್ಲೋ ಕಾಯವೆ || 1 ||

ಸಕ್ಕರೆ ಹೇರಿನಂತೆ ಸವಿದುಂಡು ಪಾಯಸ
ಬಿಟ್ಟಗಲಿ ಹೋಗುತೀಯ ಜೀವವೆ

ದಕ್ಕಗೊಡದೆ ಬಂದು ಯಮನವರೆಳೆದೊಯ್ಯುವಾಗ
ಸಕ್ಕರೆ ವಿಷವಾಯಿತಲ್ಲೋ ಕಾಯವೆ || 2 ||

ಅಂದಣದೈಶ್ವರ್ಯ ದಂಡಿಗೆ ಪಲ್ಲಕ್ಕಿ
ಮಂದ-ಗಮನೆಯರು ಜೀವವೆ
ಮಂದ-ಗಮನೆಯರು ಯಾರೊ ಮಡದಿ-ಮಕ್ಕಳಿನ್ನಾರೋ
ಬಂದಂತೆ ಹೋಗುವ್ಯೇನೋ ಕಾಯವೆ || 3 ||

ಸೋರುವೋ ಮನೆಯೊಳು ಮೌನ ಮಾನಾದಿಗಳು
ಬೇರಾಯಿತು ನಿನ್ನ ಮನಸು ಜೀವವೆ
ತೋರಗೊಡದೆ ಬಂದು ಯಮನವರೆಳೆದೊಯ್ಯುವಾಗ
ಯಾರಿಗೆ ಯಾರಿಲ್ಲೋ ಕಾಯವೆ || 4 ||

ನೀರ ಮೇಲಣ ಗುಳ್ಳೆ ತೋರಿ ಒಡೆದಂತೆ
ಹೇಳದೆ ಹೋಗುತೀಯೆ ಜೀವವೆ
ಈ ರೀತಿ ಸಭೆಗೆ ಬಂದು ಯಮನವರೆಳೆದೊಯ್ಯುವಾಗ
ಆರಿಗೆ ಪೇಳುವುದು ಕಾಯವೆ || 5 ||

ಮಾಳಿಗೆ ಮನೆ ಬಿಟ್ಟು ಜಾಳಿಗೆ ಹೊನ್ನ ಬಿಟ್ಟು
ಹೇಳದೆ ಹೋಗುತಿಯ ಜೀವವೆ
ಹೇಳಲೀಸರೆ  ಬಂದು ಯಮನವರೆಳೆದೊಯ್ಯುವಾಗ
ಮಾಳಿಗೆ ಮನೆಯಿನ್ನೇಕೆ ಕಾಯವೆ || 6 ||

ಹುಟ್ಟಿದ್ದು ಹೊಲೆಯೂರು ಬೆಳೆದದ್ದು ಮೊಲೆಯೂರು
ಇಟ್ಟದ್ದು ಈ ಊರು ಎತ್ತಿದ್ದು ಕಾಡೂರು
ಸೃಷ್ಟಿಗೊಡೆಯ ನಮ್ಮ ಪುರಂದರವಿಠಲನ್ನ
ಗಟ್ಯಾಗಿ ಪೂಜೆಯ ಮಾಡೋ ಕಾಯವೆ || 7 ||

**Note:** The below given lyrics are as per Ref. 3 and Ref. 4.

ರಾಗ: ನಾದನಾಮಕ್ರಿಯೆ ತಾಳ: ಆದಿ

ಅನುದಿನದಲಿ ಬಂದು ತನುವ ಸೂರೆಯಗೊಂಡು
ಎನಗೊಂದು ಮಾತ ಪೇಳೊ ಜೀವವೆ ! ಪ

ಘನಕೋಪದಲಿ ಬಂದು ಯಮನವರಳೆದೊಯ್ವಾಗ
ನಿನಕೂಡಿನ್ನೇತರ ಮಾತೊ ಕಾಯವೆ! ಅ.ಪ

ಬೆಲ್ಲದ ಹೇರಿನಂತೆ ಬೇಕಾದ ಬಂಧು - ಬಳಗ
ನಿಲ್ಲೊ ಮಾತನಾಡತೇನೆ ಜೀವವೆ
ನಿಲ್ಲಗೊಡದೆ ಬಂದು ಯಮನವರೆಳೆದೊಯ್ವಾಗ
ಬೆಲ್ಲ ಬೇವಾಯಿತಲ್ಲೋ ಕಾಯವೆ ! 1

ಸಕ್ಕರೆ ಹೇರಿನಂತೆ ಸವಿದುಂಡು ಪಾಯಸವ
ದಿಕ್ಕೆಟ್ಟು ಹೋಗುತೀಯೋ ಜೀವವೆ
ದಕ್ಕಗೊಡದೆ ಬಂದು ಯಮನವರೆಳೆದೊಯ್ವಾಗ
ಸಕ್ಕರೆ ವಿಷವಾಯ್ತೋ ಕಾಯವೆ ! 2

ಅಂದಣದೈಶ್ವರ್ಯ ದಂಡಿಗೆ - ಪಲ್ಲಕ್ಕಿ
ಮಂದಗಮನೆಯರು ಜೀವವೆ
ಮಂದಗಮನೆ ಯಾರೊ - ಮಡದಿ - ಮಕ್ಕಳು ಯಾರೊ
ಬಂದಂತೆ ಹೋಗ್ತೀನಿ ಕಾಯವೆ ! 3

ಸೋರುವ ಮನೆಯಲಿ ಧ್ಯಾನ - ಮೌನಾದಿಗಳು
ಬೇರಿತ್ತು ನಿನ್ನ ಮನಸು ಜೀವವೆ
ನೀರಮೇಲಣ ಗುಳ್ಳೆ ತೋರಿ ಹಾರಿದಂತೆ
ಯಾರಿಗೆ ಯಾರಿಲ್ಲ ಕಾಯವೆ ! 4

ಹುಟ್ಟಿದ್ದು ಹೊಲೆಯೂರು ಬೆಳದದ್ದು ಮೊಲೆಯೂರು
ಇಟ್ಟದ್ದು ಈ ಊರು ಜೀವವೆ
ಸೃಷ್ಟಿಗೊಡೆಯ ನಮ್ಮ ಪುರಂದರವಿಠಲನ
ಗಟ್ಟಿ ಪೂಜೆಯ ಮಾಡೊ ಕಾಯವೆ ! ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಇದು ದೇಹ ಮತ್ತು ಜೀವಗಳ ಸಂವಾದ. ಸಾಧನೆಯಿಲ್ಲದೆ ಅಂತ್ಯಕಾಲವನ್ನು ಕಂಡ ಒಂದು ಜೀವಕ್ಕೆ ದೇಹ ಹೀಗೆ ಕೇಳುತ್ತಿದೆ.

ದೇಹ–ಜೀವಗಳ ನಡುವಣ ಒಗೆತನದ ಸರಸ–ವಿರಸ ಮುಖಗಳೆರಡೂ ಹಾಸುಹೊಕ್ಕಾಗಿ ನೆಯ್ದುಕೊಂಡು ಬಂದಿರುವ ಪದ ಇದು. ಬದುಕಿನಲ್ಲಿ ತುಂಬ ಹಿತಕರವೆನ್ನಿಸುವ ಸವಿಸವಿಯಾದ ಆಹಾರ, ಐಶ್ವರ್ಯ, ಅಧಿಕಾರ, ಕಾಮಸುಖ, ಬಂಧು–ಬಳಗದ ಸುಖ ಎಲ್ಲವೂ ಅಧ್ರುವ, ಎಲ್ಲಕ್ಕೂ ತೆರೆ ಇಳಿಯುವ ಕಾಲ ಬರುತ್ತದೆ ಎಂಬ ಭಾವವನ್ನು ಈ ಕೀರ್ತನೆ ಬಿಂಬಿಸುತ್ತದೆ. ದೇಹ–ಜೀವಗಳ ನಡುವೆ ನಡೆಯುವ ಆಪ್ತ ಸಂಭಾಷಣೆಯಲ್ಲಿ ಪ್ರತಿಯೊಂದು ವಸ್ತುವಿನ ಎರಡು ಮಗ್ಗುಲುಗಳೂ ತೆರೆದುಕೊಳ್ಳುವಂತೆ ಸಾಗುವ 'ಪದ'ದ ರಚನಾಶಿಲ್ಪ ಅದ್ಭುತವಾಗಿದೆ. ಸೂಕ್ತಿಗಳಿಂದ ಇಡಿ–ಕಿರಿದು ವಿಚಾರ ಸಂಪುಷ್ಟಿಯುಳ್ಳ ಸಾರ್ಥಕ ರಚನೆ ಇದು.

**ಅನುದಿನದಲ್ಲಿ** – ದೇಹವು ಜೀವವನ್ನು ಸಂಬೋಧಿಸಿ ಹೇಳುವ ಮಾತು.

**ಘನಕೋಪದಿಂದ** – ಜೀವವು ದೇಹದ ಪ್ರಶ್ನೆಗೆ ಕೊಡುವ ಉತ್ತರ. ಯಾವಾಗಲೂ ಜೀವದ್ದೇ ಕೊನೆಯ ಮಾತು ತಾನೆ.

**ಬೆಲ್ಲದ ಹೇರಿನಂತೆ** – ಬಂಧು ಬಾಂಧವರೆಲ್ಲ ಬೆಲ್ಲದ ಹೇರಿನಂತೆ ಹಿತಕರವಾಗಿ ಕಾಣುತ್ತಿದ್ದಾರೆ. ದೇಹಕ್ಕೆ, ಆದರೆ ಜೀವದ ಉತ್ತರದಲ್ಲಿ ಬೆಲ್ಲ ಬೇವಾಗಿದೆ.

**ಸಕ್ಕರೆ ಪಾಯಸ** – ದೇಹವು ರುಚಿರುಚಿಯಾದ ಆಹಾರವನ್ನು ನೆನಪಿಸಿಕೊಂಡು ಬಾಯಲ್ಲಿ ನೀರೂರಿಸಿಕೊಂಡರೆ ಜೀವ ಸಕ್ಕರೆಯನ್ನು ವಿಷವಾಗಿ ಮಾಡುವ ದಿಕ್ಕಿನಲ್ಲಿ ಯೋಚಿಸುತ್ತಿದೆ.

**ಸೋರುವ ಮನೆಯಲ್ಲಿ** – ನವದ್ವಾರಗಳ ದೇಹ.

**ಅಂದಣದೈಶ್ವರ್ಯ** – ಪಲ್ಲಕ್ಕಿಯ ಸವಾರಿಯ ಸಂಪತ್ತು; ಅಂದಣ, ದಂಡಿಗೆ, ಪಲ್ಲಕ್ಕಿ ಎಲ್ಲವೂ ಸಮಾನಾರ್ಥಕ ಶಬ್ದಗಳು.

**ಹುಟ್ಟಿದ್ದು ಹೊಲೆಯೂರು** – ಹುಟ್ಟು ಬೆಳವಣಿಗೆ ಸಾವು ಈ ಮೂರನ್ನು ಕ್ರಮವಾಗಿ ಹೊಲೆಯೂರು, ಮೊಲೆಯೂರು, ಕಾಡೂರು ಎಂಬ ಪ್ರತಿಮೆಗಳು ವ್ಯಂಜಿಸುತ್ತವೆ. ಹೊಲೆಯೂರು ಎಂದರೆ ತಾಯ ಸ್ತನ್ಯಪಾನದ ಘಟ್ಟ, ಇಟ್ಟಿದ್ದು ಕಾಡೂರು ಎಂದರೆ ಸುಡುಗಾಡು, ರುದ್ರಭೂಮಿ.

**Classification:** Keerthane
**Ankita:** purandara vittala
**Location:** NA
**Category:** Loka Neeti, Jeevana Sambodhane, virakti,
**Sub-Category:** dina, deha, mitra jiva, sittu, yama, bella, bandhu, bevu, sakkare, visha, sampattu, hengasu, hennu, patni, makkalu, mane, mana, niru, sabhe, bangara, huttu, ooru, kaadu, puje, virakti,
**Pravachana:** NA
**Explanation:** NA